# ಅದಿತಿ ಹೊಸ ರೀತಿ...

‘ವೇದ’ ಸಿನಿಮಾದಲ್ಲಿ ‘ಕನಕ’ಳಾಗಿ ನಟನೆಗೆ ಪರಿಚಿತರಾಗಿದ್ದ ಅದಿತಿ ಸಾಗರ್, ಇದೀಗ ಮುಖ್ಯಪಾತ್ರದಲ್ಲಿ ತಮ್ಮನ್ನು ಪ್ರಸ್ತುತಪಡಿಸಿಕೊಳ್ಳುತ್ತಿದ್ದಾರೆ. ‘ಹೆಗ್ಗಣ ಮುದ್ದು’ ಸಿನಿಮಾದಲ್ಲಿ ನಟಿಸಿದ್ದು, ಸಿನಿಮಾ ಕುರಿತು ಹಲವು ಸಂಗತಿಗಳನ್ನು ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್



◆ ‘ಹೆಗ್ಗಣ ಮುದ್ದು’ ಸಿನಿಮಾದಲ್ಲಿ ಅದಿತಿ ಹೇಗೆ ಕಾಣಿಸಿಕೊಳ್ಳುತ್ತಿದ್ದಾರೆ? ಸಿನಿಮಾ ಪ್ರಕ್ರಿಯೆ ಹೇಗಿತ್ತು?

ನಮ್ಮ ಸುತ್ತಮುತ್ತ ನಾವು ನೋಡುವಂಥ ಪಾತ್ರವಿದು. ಸಾಮಾನ್ಯ ಹುಡುಗಿಯ ರೋಲ್. ಮುಖ್ಯ ಪಾತ್ರದಲ್ಲಿ ಮೊದಲ ಬಾರಿ ಕಾಣಿಸಿಕೊಳ್ಳುತ್ತಿರುವುದು ಖುಷಿಯಿದೆ. ಸಿನಿಮಾದಲ್ಲಿ ಕೆಲಸ ಮಾಡುವ ಪ್ರಕ್ರಿಯೆ ತುಂಬಾ ಮಜವಾಗಿತ್ತು. ಸಿನಿಮಾದಲ್ಲಿ ನಿರ್ದೇಶಕ ಅವಿನಾಶ್ ಬಳೆಕ್ಕಳ ಅವರೊಂದಿಗೆ ಮಾತುಕತೆ, ಚರ್ಚೆ ಮಾಡುತ್ತಲೇ, ಸಿನಿಮಾಗೆ ಕೆಲವು ಇನ್‌ಪುಟ್‌ಗಳನ್ನು ನೀಡುತ್ತಲೇ ಚಿತ್ರೀಕರಣ ಸಾಗಿತು. ಸುಧಾರಣೆಯ ಸಾಧ್ಯತೆಯನ್ನು ಅನ್ವೇಷಿಸುತ್ತಲೇ ಸಿನಿಮಾ ರೂಪುಗೊಂಡಿತು. ಸಿನಿಮಾ ಹಾಗೂ ನನ್ನ ಪಾತ್ರ ಹೇಗೆ ಕಾಣುತ್ತದೆ ಎಂಬುದನ್ನು ನೋಡಲು ನಾನೂ ತುಂಬಾ ಉತ್ಸುಕಳಾಗಿದ್ದೇನೆ. ‘ವೇದ’ ಸಿನಿಮಾಗಿಂತ ಸಂಪೂರ್ಣ ಬೇರೆಯದ್ದೇ ರೀತಿ ಕಾಣಿಸಿಕೊಂಡಿದ್ದೇನೆ.

◆ ಮುಖ್ಯ ಪಾತ್ರಧಾರಿಯಾಗಿ ಸಿನಿಮಾದಿಂದ ಸಿಕ್ಕ ಹೊಸ ಕಲಿಕೆ?

‘ವೇದ’ ಸಿನಿಮಾದಲ್ಲಿ ಆ್ಯಕ್ಷನ್ ಮೂಲಕವೇ ಎಲ್ಲವನ್ನೂ ಹೇಳಬೇಕಿತ್ತು. ಕನಕ ಹೋಗೋದೇ ಹೊಡೆಯೋಕೆ ಎನ್ನುವಂತೆ ಯಾವಾಗಲೂ ಬ್ಯಾಗ್‌ನಲ್ಲಿ ಕಲ್ಲು ಇಟ್ಟುಕೊಂಡು ಓಡಾಡುತ್ತಿದ್ದಳು. ಮಾತಿಲ್ಲದೆ ಇದ್ದರೂ ಗಟ್ಟಿಯಾದ ಪಾತ್ರ. ಆದರೆ ಈ ಸಿನಿಮಾದಲ್ಲಿ ನಾನು ತುಂಬಾ ಸಹಜವಾಗಿರಬೇಕಿತ್ತು. ಹಾಗೆಯೇ, ನಗಬೇಕಿತ್ತು. ನನಗೆ ಸಹಜವಾಗಿ ನಗುವುದೇ ಆಗುತ್ತಿರಲಿಲ್ಲ. ನನಗಿರುವ ಸವಾಲುಗಳೇನು ಎನ್ನುವುದೂ ಅರ್ಥ ಆಯಿತು.

ಒಂದು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿಕೊಂಡರೆ ತಲೆಯೊಳಗೆ ಏನೇನೋ ಆಲೋಚನೆಗಳು ಓಡುತ್ತಿರುತ್ತವೆ, ಅವನ್ನು ತೋರಿಸಿಕೊಳ್ಳೋಕೆ ಆಗೋದಿಲ್ಲ, ಆದರೂ ಅವು ಮುಖದ ಮೇಲೆ ಕಾಣಿಸಿಕೊಳ್ಳುತ್ತವೆ. ಅಂಥ ಚಿಕ್ಕ ಚಿಕ್ಕ ಎಳೆಗಳನ್ನು ಅಭಿವ್ಯಕ್ತಿಸುವ ಪರಿ ಚೆನ್ನಾಗಿತ್ತು.

◆ ಈ ಪಾತ್ರ ನಿಮ್ಮ ಮನಸ್ಸಿಗೆ ಹತ್ತಿರವಾಗಲು ಬಹುಮುಖ್ಯ ಕಾರಣ?

ದಿನನಿತ್ಯದ ಜೀವನದಲ್ಲಿ ಪ್ರಬಲ ಮನೋಭಾವದ ಮಹಿಳೆಯರನ್ನು ನೋಡುತ್ತಿರುತ್ತೇವೆ. ಅಂಥ ಮಹಿಳೆಯರ ಕಥೆಯನ್ನು ಪಾತ್ರದ ಮೂಲಕ ಹೇಳುವುದು ತುಂಬಾ ಮುಖ್ಯ. ಬಹುಪಾಲು ಜನರು ಗಂಡಸರ ಕಥೆಯನ್ನೇ ಹೆಚ್ಚಾಗಿ ಹೇಳುವುದು, ಕೇಳುವುದು. ಹೆಣ್ಣುಮಕ್ಕಳ ಪಾತ್ರವನ್ನೂ ಗಂಡಸರೇ ಬರೆಯುವುದು. ಆದರೆ ಬಹಳ ಚೆನ್ನಾಗಿ ನನ್ನ ಪಾತ್ರವನ್ನು ಬರೆದಿದ್ದಾರೆ ಹಾಗೂ ಪೋಷಿಸಿದ್ದಾರೆ.

◆ ನೋಡುಗರಿಗೆ ಸಿನಿಮಾ ಏನು ಹೇಳಲು ಹೊರಟಿದೆ?

ಪ್ರತಿನಿತ್ಯ ನಮ್ಮ ಒಡನಾಟಕ್ಕೆ ಸಿಗುವ ಪ್ರತಿಯೊಬ್ಬರೊಂದಿಗೆ ನಾವು ಬೆಳೆಸಿಕೊಳ್ಳುವ, ಹಂಚಿಕೊಂಡಿರುವ ಒಂದು ಸಂಬಂಧದ ಬಗ್ಗೆ ಹೇಳುತ್ತದೆ. ನಮ್ಮದೇ ಒಂದು ಲೋಕ ಎಂದು ಆಗುವುದೇ ನಾವು ಹಂಚಿಕೊಳ್ಳುವ ಸಂಬಂಧದಿಂದ. ಬೇರೆ ಬೇರೆ ರೀತಿಯಲ್ಲಿ ಬೆಳೆದು ದೊಡ್ಡವರಾಗಿ, ಮದುವೆ ಆಗಿ ಇಬ್ಬರೂ ಒಟ್ಟಿಗೆ ಇರುವಾಗ ಅವರ ಮನಸ್ಥಿತಿ, ಬಿಕ್ಕಟ್ಟು, ಸಂಘರ್ಷಗಳು ಇವೆಲ್ಲವೂ ಸಂಬಂಧದ ಬಗ್ಗೆ ಮಾತಾಡುತ್ತವೆ. ಸಂಬಂಧದ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡುವ ಸಿನಿಮಾ.

◆ ಸ್ಕ್ರಿಪ್ಟ್ ನಿಮ್ಮ ಮುಂದೆ ಬಂದಾಗ ನಿಮ್ಮ ಗಮನ ಸೆಳೆದ ಅಂಶ?

ನಿರ್ದೇಶಕರು ಕಥೆಯ ಬಗ್ಗೆ ಇಟ್ಟುಕೊಂಡಿದ್ದ ನಂಬಿಕೆ ನನ್ನನ್ನು ಸೆಳೆಯಿತು. ನಮ್ಮ ಕನಸನ್ನು ನಾವು ನಂಬುವುದಿದೆಯಲ್ಲ, ಅದು ದೊಡ್ಡ ಪ್ಲಸ್ ಪಾಯಿಂಟ್. ತಮ್ಮಲ್ಲಿ ಹುಟ್ಟಿಕೊಂಡ ಕಥೆಯನ್ನು ಸಿನಿಮಾ ಮಾಡಲು ಧೈರ್ಯ ಮಾಡುವುದು, ಅದನ್ನು ನಂಬುವುದು ಗಟ್ಟಿತನ. ಅದೇ ನನ್ನನ್ನು ಹಿಡಿದಿಟ್ಟುಕೊಂಡ ಅಂಶ. ಇದರೊಂದಿಗೆ, ನಾನು ಯಾವಾಗಲೂ ನಿರೀಕ್ಷಿಸುವಂಥ, ಅನ್ವೇಷಿಸುವಂಥ ಉತ್ತಮ ಪಾತ್ರವೂ ಇದಾಗಿತ್ತು. ಈ ಸಿನಿಮಾ ಮೇಕಿಂಗ್‌ನಲ್ಲಿ ‘ಕೊಲಾಬರೇಷನ್’ ಅರ್ಥಾತ್ ಸಹಯೋಗ ಎನ್ನುವುದು ನನಗೆ ಬಹಳ ಹಿಡಿಸಿತು.

◆ ಸಿನಿಮಾರಂಗದಲ್ಲಿ ಹೆಣ್ಣುಮಕ್ಕಳ ಒಳಗೊಳ್ಳುವಿಕೆ ಬಗ್ಗೆ ನಿಮ್ಮ ಅನಿಸಿಕೆ?

ಹೆಣ್ಣುಮಕ್ಕಳು ಸಿನಿಮಾರಂಗದಲ್ಲಿ ಹೆಚ್ಚು ಬರಬೇಕು. ಸಿನಿಮಾ ಕಥೆಗಳನ್ನು ಬರೆಯಬೇಕು. ಮಹಿಳೆಯಾಗಿ ನಾವು ಜೀವನವನ್ನು ನೋಡುವ, ಅನುಭವಿಸುವ ರೀತಿ ಗಂಡಸರಿಗಿಂತ ಬೇರೆಯಾಗಿದೆ. ಎರಡೂ ಬೇರೆಯದೇ ಜಗತ್ತು. ದೃಷ್ಟಿಕೋನವೂ ಬೇರೆ. ನಮ್ಮ ಕಥೆಗಳನ್ನು ನಾವು ಹೇಳಿದರೆ ಇನ್ನಷ್ಟು ಪರಿಣಾಮಕಾರಿಯಾಗಿರುತ್ತದೆ ಎನ್ನುವುದು ನನ್ನ ಭಾವನೆ.

◆ ಸಿನಿಮಾ ಹೊರತಾಗಿ ಸಂಗೀತದ ಪಯಣ?

ಈಚೆಗೆ ಅಮೀರ್ ಖಾನ್ ಪ್ರೊಡಕ್ಷನ್ಸ್‌ನ ಡಾಕ್ಯುಮೆಂಟರಿಯಲ್ಲಿ ಅಡಿಷನಲ್ ಮ್ಯೂಸಿಕ್ ಮಾಡಿದ್ದೇನೆ. ಚೆನ್ನಾಗಿ ಮೂಡಿಬಂದಿದೆ. ಇನ್ನಷ್ಟು ಕೆಲಸಗಳು ಸಾಗುತ್ತಿವೆ. ■